ಒತ್ತಿಕೊಂಡು ಗೇರ್ ಬದಲಾಯಿಸಿದೆ.

"ಮೆಚ್ಚುಗೆ ಸೂಚಿಸುತ್ತೀರಾ?" ಎಡಗಡೆ ತಲೆಯನ್ನು ತಿರುಗಿಸಿ, ಅವನನ್ನು ನೋಡಿ ಕೇಳಿದೆ.

"ಮ್, ಕೊಂಚ. ನಿಮ್ಮ ಫೋನಲ್ಲಿ ವಾಯ್ಸ್ ಆಕ್ಟಿವೇಷನ್ ಮಾಡಬಹುದಲ್ಲಾ?"

"ಹೌದು ಮಾಡಬಹುದು."

"ಯಾಕೆ ಇಷ್ಟು ದಿನ ಮಾಡಲಿಲ್ಲ? ಗಾಡಿ ಓಡಿಸುವಾಗ ಗಮನ ಕಳೆದುಕೊಳ್ಳದೆ ಇರಬಹುದಲ್ಲಾ..."

"ಯಾರಿಗೆ?" ಎಂದೆ.

"ಈಗ ನಿಮ್ಮ ಪಕ್ಕದಲ್ಲಿ ಇರುವ ನನಗೆ."

ಅವನು ಹೇಳಿ ಮುಗಿಸುವಾಗ, ನನ್ನ ಅರಿವಿಲ್ಲದೇ ನಗು ಬಂದಿತು.

ಯಾವುದೋ ತಿರುವಿನಲ್ಲಿ ತಿರುಗಿಸಿ ಕಾರನ್ನು ಪಾರ್ಕ್ ಮಾಡಿದೆ.

"ಹತ್ತು ನಿಮಿಷದ ಕೆಲಸ ಅಷ್ಟೇ. ಹೆಚ್ಚೆಂದರೆ ಹದಿನೈದು ನಿಮಿಷ. ಹಾಡು ಕೇಳುತ್ತಾ ಇರಿ. ಬಂದುಬಿಡುತ್ತೇನೆ."

"ನೋ ಪ್ರಾಬ್ಲಮ್" ಎಂದ ಸಹಜವಾಗಿ.

ಕಾರಿಂದ ಇಳಿದು ಒಂದು ಗಾಜಿನ ಕಟ್ಟಡದ ಒಳಗೆ ಹೋದೆ.

ಕಾರಿನ ಹಿಂದಿನ ಸೀಟನ್ನು ನೋಡಿದ. ಪೇಪರ್ ಚೀಲಗಳಲ್ಲಿ ಬಟ್ಟೆಬರೆ, ಕೆಲವು ತಮಿಳು, ಹಲವು ಇಂಗ್ಲಿಷ್ ಪುಸ್ತಕಗಳು, ಇಂಗ್ಲಿಷ್ ಸಿನಿಮಾ ಡಿವಿಡಿಗಳು, ಅಂದಿನ ಇಂಗ್ಲಿಷ್ ದಿನಪತ್ರಿಕೆಗಳು ಒಂದು ಮಿನಿ ಎಕ್ಸಿಬಿಷನ್ ಥರಾ ಹರಡಿಕೊಂಡಿದ್ದವು.

ಸಂಗೀತ ಹಾಕಿದ.

ಒಂದು ಗಂಡು ದನಿ, ಪಿಯಾನೊ ನೋವಿನಿಂದ ಇಂಗ್ಲೀಷಿನಲ್ಲಿ ಶಬ್ದ ಮಾಡಿದವು. ಇದನ್ನು ಕೇಳಲು ಹೇಳಿದಳೇ? ರೇಡಿಯೊ ಬದಲಿಸಿದ. ಅದರಲ್ಲಿ ಉಸಿರು ಬಿಗಿಹಿಡಿದುಕೊಂಡು ಮಾತನಾಡಿದ ಹೆಣ್ಣು ದನಿ ಕೇಳಿತು. ಅವನಿಗೆ ಎದೆ ನೋವು ಬಂದಂತೆ ತೋರಿತು. ರೇಡಿಯೊ ಆರಿಸಿ ಹಿಂದಿನ ಸೀಟಿನಲ್ಲಿದ್ದ ತಮಿಳು ಪುಸ್ತಕಗಳನ್ನು ತೆಗೆದು ತಿರುವಿದ.

"ಕಾಫಿಗೆ ಹೋಗೋಣವೆ?"

ಸರಕ್ಕನೆ ತಲೆ ಎತ್ತಿದ.

"ನೀವು ಬಂದ ಸುಳಿವೇ ಸಿಗಲಿಲ್ಲ."

"ಸಾರಿ, ಹೆದರಿಬಿಟ್ರಾ?"

"ನಿಮ್ಮ ಜತೆ ಮಾತನಾಡೋದು ಒಂದು ಇಂಗ್ಲಿಷ್ ಸಿನಿಮಾ ನೋಡೋ ಪರಿಣಾಮ ಕೊಡ್ತಿದೆ. ಅದಕ್ಕೆ ಕಾರಣ ಏನಂತ ನಿಮ್ಮ ಕಾರಿನ ಹಿಂದಿನ ಸೀಟ್ ನೋಡಿ ತಿಳ್ಕೊಂಡೆ."

"ಹಾ... ಹಾ, ಮ್ಯೂಸಿಕ್?"

"ಇಲ್ಲ ಬೇಡ. ಮಾರ್ಕ್ ಆಂಟನಿ ಇಷ್ಟಾನೋ?"

"ಕೇಳಿದ್ರಾ? ತುಂಬಾ ಇಷ್ಟ. ನಿಮಗೆ?"

"ಸುಮಾರಾಗಿ ಇಷ್ಟ. ವಾಯ್ಸ್‌ನಲ್ಲಿ ಯಾವಾಗಲೂ ಒಂದು ತವಕ ಇರುತ್ತೆ."

"ಹೌದು, ಲೇಟಸ್ಟ್ ಆಗಿ ಅಟೆಲ್ ಇಷ್ಟ."

"ಮ್. ನಾನು ಮ್ಯೂಸಿಕ್‌ನಲ್ಲಿ ಬಹಳ ಚೂಸಿ."

ಹೋಗುತ್ತಿರುವುದು ಗೊತ್ತಾಗದಂತೆ ಗಾಡಿ ಸಾಗುತ್ತಿತ್ತು.